

## ಹಲವು ವಿಶೇಷಗಳ ಲೋಕಸಭಾ ಚುನಾವಣೆ

2024ರ ಲೋಕಸಭಾ ಚುನಾವಣೆ ಹಲವು ಕಾರಣಗಳಿಂದ ವಿಶೇಷವಾದುದು. 543 ಲೋಕಸಭಾ ಸ್ಥಾನಗಳಲ್ಲಿ 291 ಸ್ಥಾನಗಳನ್ನು ಗೆಲ್ಲುವ ಮೂಲಕ ಎನ್‌ಡಿಎ ಒಕ್ಕೂಟ ಗೆಲುವು ಸಾಧಿಸಿತು. ಬಿಜೆಪಿ 240 ಸ್ಥಾನಗಳನ್ನು ಗಳಿಸಿ, ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗಿ ಜೂನ್ 9ರಂದು ಪ್ರಮಾಣವಚನ ಸ್ವೀಕರಿಸಿದರು. ಈ ಬಾರಿ ಲೋಕಸಭೆ ಚುನಾವಣೆಯಲ್ಲಿ 31.2 ಕೋಟಿ ಮಹಿಳೆಯರು ಸೇರಿದಂತೆ ಒಟ್ಟು 64.2 ಕೋಟಿ ಮತದಾರರು ಮತ ಚಲಾಯಿಸಿದರು.

'ಇಂಡಿಯಾ' ಮೈತ್ರಿಕೂಟದ ಗಮನಾರ್ಹ ಸಾಧನೆಯೊಂದಿಗೆ, ಹತ್ತು ವರ್ಷಗಳ ನಂತರ ಪ್ರಬಲ ವಿರೋಧಪಕ್ಷ ರೂಪುಗೊಂಡಿದ್ದು ಈ ಬಾರಿಯ ಚುನಾವಣಾ ಫಲಿತಾಂಶದ ವಿಶೇಷಗಳಲ್ಲೊಂದು. ಕಾಂಗ್ರೆಸ್‌ನ ರಾಹುಲ್ ಗಾಂಧಿ ವಿರೋಧಪಕ್ಷಗಳ ನಾಯಕ ಸ್ಥಾನ ತುಂಬುವ ಮೂಲಕ, ದಶಕದ ನಂತರ ಲೋಕಸಭೆ ವಿರೋಧಪಕ್ಷಗಳ ನಾಯಕನನ್ನು ಕಾಣುವಂತಾಯಿತು. ಕೇರಳದ ವಯನಾಡ್‌ನಲ್ಲಿ ನಡೆದ ಲೋಕಸಭಾ ಉಪ ಚುನಾವಣೆಯಲ್ಲಿ ಆರಿಸಿ ಬರುವ ಮೂಲಕ ಪ್ರಿಯಾಂಕಾ ಗಾಂಧಿ ಅವರೂ ಲೋಕಸಭೆ ಪ್ರವೇಶಿಸಿದರು. ಅಣ್ಣ–ತಂಗಿ ಒಂದೇ ಲೋಕಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಪ್ರಸಕ್ತ ಲೋಕಸಭೆಯ ವಿಶೇಷ ಸಂಗತಿಗಳಲ್ಲೊಂದು.







## ಕಾಶ್ಮೀರ: ಯಶಸ್ವೀ ಚುನಾವಣೆ

ಜಮ್ಮು ಮತ್ತು ಕಾಶ್ಮೀರದಲ್ಲಿ ಹತ್ತು ವರ್ಷಗಳ ನಂತರ ವಿಧಾನಸಭಾ ಚುನಾವಣೆ ಯಶಸ್ವಿಯಾಗಿ ನಡೆದಿದೆ. ಸಂವಿಧಾನದ 370ನೇ ವಿಧಿ ಅಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು 2019ರಲ್ಲಿ ಕೇಂದ್ರ ಸರ್ಕಾರ ರದ್ದುಗೊಳಿಸಿದ ತರುವಾಯ ನಡೆದ ಮೊದಲ ಚುನಾವಣೆ ಇದು. ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಎರಡು ಹಂತಗಳಲ್ಲಿ ನಡೆದ ಚುನಾವಣೆಯಲ್ಲಿ ಕಾಶ್ಮೀರದ ಮತದಾರರು ಉತ್ಸಾಹದಿಂದ ಮತ ಚಲಾಯಿಸಿದರು. ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ ಮೈತ್ರಿಕೂಟ ಚುನಾವಣೆಯಲ್ಲಿ ಗೆಲುವು ಸಾಧಿಸಿ ಸರ್ಕಾರ ರಚಿಸಿದೆ. ಸರ್ಕಾರ ರಚಿಸಲು ಯಶಸ್ವಿಯಾಗದಿದ್ದರೂ, ಜಮ್ಮು ಪ್ರದೇಶದಲ್ಲಿ ಬಿಜೆಪಿ ಸಾಧನೆ ಉತ್ತಮವಾಗಿದೆ.

## ಅಂಕೆಯಿಲ್ಲದ ಮಳೆಯೂ ಭೂ ಕುಸಿತಗಳೂ...

2024ರ ಮುಂಗಾರು ದಾಖಲೆ ಪ್ರಮಾಣದಲ್ಲಿ ಸುರಿದಿದ್ದರಿಂದಾಗಿ ದೇಶದ ವಿವಿಧ ಭಾಗಗಳು ಸಾವು–ನೋವು ಅನುಭವಿಸಿದವು. ಕರ್ನಾಟಕದ ಶಿರೂರು ಹಾಗೂ ವಯನಾಡ್‌ಗಳಲ್ಲಿ ಭಾರೀ ಭೂಕುಸಿತ ಸಂಭವಿಸಿತು. ಶಿರೂರಿನಲ್ಲಿನ ದುರ್ಘಟನೆಯಿಂದ ಜೀವಹಾನಿ ಸಂಭವಿಸದಿದ್ದರೂ, ನಷ್ಟದ ಪ್ರಮಾಣ ಸಣ್ಣದೇನಲ್ಲ. ಜುಲೈ 2024ರಲ್ಲಿ ಉಂಟಾದ ವಿನಾಶಕಾರಿ ಪ್ರವಾಹ ಮತ್ತು ಭೂಕುಸಿತದಿಂದಾಗಿ ವಯನಾಡ್ ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ಜನರು ಸಾವಿಗೀಡಾಗಿದರು.

ಚಂಡಮಾರುತಗಳು ಬೆನ್ನುಬೆನ್ನಿಗೆ ಅಪ್ಪಳಿಸುವ ಮೂಲಕ ಈ ವರ್ಷದ ಮಳೆಗಾಲ ಅವಧಿ ಮೀರಿಯೂ ಮುಂದುವರೆದಿದೆ. ವರ್ಷದ ಕೊನೆಯಲ್ಲಿ ಕಾಡಿದ 'ಫೆಂಜಲ್' ಚಂಡಮಾರುತ ಕರ್ನಾಟಕ, ತಮಿಳುನಾಡು ಸೇರಿದಂತೆ ದೇಶದ ವಿವಿಧ ಭಾಗಗಳನ್ನು ತೋಯಿಸಿತು.